

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **12-01-2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿದ್ದ ಪರಿಶುದ್ಧ ಶಕ್ತಿಯ ಬಗ್ಗೆ ಪ್ರಸ್ತಾಪಿಸುತ್ತಾ ಹೇಳಿದರು: ನನ್ನ ವಿಶ್ವಾಸವೇನೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿದ್ದ ಪರಿಶುದ್ಧ ಶಕ್ತಿ ಹೇಗಿತ್ತೆಂದರೆ ಬೇರೆ ಯಾವ ಪ್ರವಾದಿಗೂ ಈ ಲೋಕದಲ್ಲಿ ಅಂತಹ ಶಕ್ತಿ ಲಭಿಸಿರಲಿಲ್ಲ. ಇಸ್ಲಾಮ್ ಅಭಿವೃದ್ಧಿಗೊಂಡುದರ ರಹಸ್ಯ ಇದೇ ಆಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಕರ್ಷಣ ಶಕ್ತಿ ಬಲಿಷ್ಠವಾಗಿತ್ತು. ಅವರ ಮಾತುಗಳಿಗೆ ಎಂತಹ ಪ್ರಭಾವವಿತ್ತೆಂದರೆ ಅವುಗಳನ್ನು ಆಲಿಸಿದವನು ಅವರನ್ನು ಪ್ರೀತಿಸುವವನಾಗುತ್ತಿದ್ದನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾರನ್ನು ತನ್ನ ಕಡೆಗೆ ಸೆಳೆದರೋ ಅವರನ್ನು ಪರಿಶುದ್ಧರನ್ನಾಗಿ ಮಾಡಿದರು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಸಹಾಬರಲ್ಲಿ ಎಂತಹ ಪರಿವರ್ತನೆಗಳನ್ನು ಉಂಟುಮಾಡಿದರು ಎನ್ನುವುದನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸಹಾಬರ ಸ್ಥಿತಿಯ ಕಡೆಗೆ ನೋಡುವುದಾದರೆ ಅವರಲ್ಲಿ ಯಾರೊಬ್ಬನನ್ನೂ ಸುಳ್ಳು ಹೇಳುವವನಾಗಿ ಕಾಣಲಾರೆವು. ವಾಸ್ತವದಲ್ಲಿ ಅರಬ್ ದೇಶದ ಹಿಂದಿನ ಕಾಲದ ಸ್ಥಿತಿಯನ್ನು ನೋಡುವುದಾದರೆ ಅವರು ನೈತಿಕವಾಗಿ ಪಾತಾಳದಲ್ಲಿದ್ದರು. ಅವರು ವಿಗ್ರಹಾರಾಧಕರಾಗಿದ್ದರು. ಅನಾಥರ ಸಂಪತ್ತನ್ನು ಕಬಳಿಸುತ್ತಿದ್ದರು. ಪ್ರತಿಯೊಂದು ಕೆಟ್ಟ ಕೆಲಸ ಮಾಡಲು ಧೈರ್ಯ ಹೊಂದಿದವರೂ ನಿರ್ಭೀತರೂ ಆಗಿದ್ದರು. ಅವರು ಡಕಾಯಿತಿಗಾರರ ಹಾಗೆ ಜೀವಿಸುತ್ತಿದ್ದರು. ಅವರು ಶಿರದಿಂದ ಪಾದದ ತನಕ ಮಾಲಿನ್ಯದಲ್ಲಿ ಮುಳುಗಿದ್ದರು. ಆದರೆ ಇಂತಹ ಜನರಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಂತಹ ಕ್ರಾಂತಿಯನ್ನು ಉಂಟುಮಾಡಿದರೆಂದರೆ ಇದಕ್ಕೆ ಸಮಾನವಾದ ಉದಾಹರಣೆ ಬೇರೆ ಜನಾಂಗಗಳಲ್ಲಿ ಕಾಣಿಸುವುದಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತೋರಿಸಿದ ಈ ಪವಾಡ ಎಷ್ಟು ಹಿರಿದಾಗಿದೆ ಎಂದರೆ ಲೋಕದ ಕಣ್ಣನ್ನು ತೆರೆಯಲು ಸಾಕಷ್ಟು ಸಾಮರ್ಥ್ಯವುಳ್ಳದ್ದಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಒಬ್ಬ ಮನುಷ್ಯನನ್ನು ಸುಧಾರಣೆ ಮಾಡುವುದು ಎಷ್ಟು ಕಷ್ಟಕರವಾಗಿದೆ. ಆದರೆ ಇಲ್ಲಿ ಒಂದು ಜನಾಂಗವನ್ನೇ ಸುಧಾರಣೆ ಮಾಡಲಾಯಿತು. ಅವರು ತಮ್ಮ ವಿಶ್ವಾಸ ಮತ್ತು ನಿಷ್ಠೆಯ ಎಂತಹ ಉದಾಹರಣೆ ತೋರಿಸಿದರೆಂದರೆ ಅವರು ಸತ್ಯ ನಿಷ್ಠೆಯಲ್ಲಿ ಆಡು ಕುರಿಗಳ ಹಾಗೆ ವಧಿಸಲ್ಪಟ್ಟರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾರ್ಗದರ್ಶಕ ಪಾಠಗಳು ಮತ್ತು ಪ್ರಭಾವಶಾಲಿ ಉಪದೇಶಗಳು ಅವರನ್ನು ಉನ್ನತ ನೈತಿಕ ಸ್ಥಾನಕ್ಕೇರಿಸಿತು. ಅವರಲ್ಲಿ ಪರಿಶುದ್ಧ ಗುಣಗಳು ಹುಟ್ಟಿದವು. ಇಸ್ಲಾಮ್ ಧರ್ಮದ ಈ ಉದಾಹರಣೆಯನ್ನು ಲೋಕದ ಮುಂದೆ ನಾವು ಇರಿಸುತ್ತಿದ್ದೇವೆ. ಇದೇ ಇಸ್ಲಾಮ್ ಮತ್ತು ಮಾರ್ಗದರ್ಶನದ ಕಾರಣದಿಂದ ಅಲ್ಲಾಹನು ಒಂದು ಭವಿಷ್ಯವಾಣಿಯ ರೂಪದಲ್ಲಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮುಹಮ್ಮದ್ ಎಂಬ ಹೆಸರನ್ನು ನೀಡಿದನು. ಆ ಕಾರಣದಿಂದ ಲೋಕದಲ್ಲಿ ಅವರು ಹೊಗಳಿಕೆಗೆ ಪಾತ್ರರಾದರು. ಏಕೆಂದರೆ ಅವರು ಭೂಮಿಯನ್ನು ಶಾಂತಿ, ಸೌಹಾರ್ದ, ಉನ್ನತ ನೈತಿಕ ಗುಣಗಳು ಮತ್ತು ಸತ್ಕರ್ಮಗಳಿಂದ ತುಂಬಿಸಿದರು.

ಸಹಾಬರ ಅಸಾಧಾರಣ ಪದವಿ ಮತ್ತು ಅವರಲ್ಲಿ ತಲೆದೋರಿದ ಅಸಾಮಾನ್ಯ ಬದಲಾವಣೆಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಸಹಾಬರ ಉದಾಹರಣೆ ನೋಡಿರಿ. ವಾಸ್ತವಿಕವಾಗಿ ಸಹಾಬರ ಉದಾಹರಣೆಗಳು ಹೇಗಿವೆ ಎಂದರೆ ಸಕಲ ಪ್ರವಾದಿಗಳ ಉದಾಹರಣೆಗಳಾಗಿವೆ. ಅಲ್ಲಾಹನು ಕರ್ಮಗಳನ್ನು ಮಾತ್ರ ಇಷ್ಟಪಡುತ್ತಾನೆ. ಸಹಾಬರು ಕುರಿಗಳ ಹಾಗೆ ತಮ್ಮ ಜೀವವನ್ನು ಬಲಿದಾನವಾಗಿ ಅರ್ಪಿಸಿದರು. ಆದಮ್ ಅಲೈಹಿಸ್ಸಲಾಮ್ ಮೊದಲುಗೊಂಡು ನುಬುವ್ವತ್ ಎಂಬ ಸ್ವರೂಪ ಜಾರಿಯಲ್ಲಿತ್ತು. ಆದರೆ ಅದೇನೆಂದು ಮನವರಿಕೆ ಆಗುತ್ತಿರಲಿಲ್ಲ. ಆದರೆ ಬಹುಮಾನ್ಯರಾದ ಸಹಾಬರು ಅದನ್ನು ಬೆಳಗಿಸಿ ಪ್ರಕಟಿಸಿದರು. ಸತ್ಯ ಮತ್ತು ನಿಷ್ಠೆ ಎಂದು ಕರೆಯಲ್ಪಡುವುದೇ ಅದೆಂದು ತೋರಿಸಿಕೊಟ್ಟರು. ಅವರ ಅವಿಶ್ರಾಂತ ಜೀವಿತದ ಉದಾಹರಣೆ ಸಹ ಬೇರೆಲ್ಲಿಯೂ ಕಾಣಿಸುವುದಿಲ್ಲ. ಬಹುಮಾನ್ಯರಾದ ಸಹಾಬರ ಗುಂಪು ಅದ್ಭುತಕರ ಗುಂಪಾಗಿತ್ತು. ಘನತೆಯನ್ನು ಗುರುತಿಸುವ ಸಾಮರ್ಥ್ಯವುಳ್ಳ ಹಾಗೂ ವಿಧೇಯತೆ ಪ್ರಕಟಿಸುವ ಗುಂಪು ಅದಾಗಿತ್ತು. ಅವರ ಹೃದಯಗಳು ದೃಢ ವಿಶ್ವಾಸದಿಂದ ಭರಿತವಾಗಿದ್ದುವು. ದೃಢವಿಶ್ವಾಸ ಉಂಟಾಗುವಾಗ ಮೆಲ್ಲಮೆಲ್ಲಗೆ ಹೃದಯದಲ್ಲಿ ಸಂಪತ್ತು ಮೊದಲಾದುವುಗಳನ್ನು ಕೊಡುವ ಇಚ್ಛೆ ಉಂಟಾಗುತ್ತದೆ. ವಿಶ್ವಾಸ ಇನ್ನಷ್ಟು ದೃಢವಾದಾಗ ದೃಢವಿಶ್ವಾಸಿ ಅಲ್ಲಾಹನಿಗೋಸ್ಕರ ಜೀವವನ್ನು ಬಲಿದಾನವಾಗಿ ನೀಡಲು ಸಿದ್ಧನಾಗುತ್ತಾನೆ.

ಸಹಾಬರ ಶ್ರೇಷ್ಠತೆ ಬಗ್ಗೆ ಮತ್ತೊಂದು ಸ್ಥಳದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಸಹಾಬರ ಬಗ್ಗೆ ಹೇಳುತ್ತಾನೆ: لَّا تُلۡهِيهِمۡ تِجَٰرَةٞ وَلَا بَيۡعٌ عَن ذِكۡرِ ٱللَّهِ **ಲಾ ತುಲ್‌ಹೀಹಿಮ್ ತಿಜಾರತುನ್ ವಲಾ ಬೈಉನ್ ಅನ್**

**ಧಿಕ್ರಿಲ್ಲಾಹಿ.** ವ್ಯಾಪಾರ ವ್ಯವಹಾರಗಳು ಅಲ್ಲಾಹನ ಸ್ಮರಣೆಯಿಂದ ಅವರನ್ನು ವಿಮುಖರನ್ನಾಗಿ ಮಾಡುವುದಿಲ್ಲ. ಪವಿತ್ರ ಖುರ್‌ಆನಿನ ಈ ವಚನವು ಸಹಾಬರು ತಮ್ಮೊಳಗೆ ಬಹಳ ಪರಿವರ್ತನೆಗಳನ್ನು ಮಾಡಿದ್ದರೆಂಬುದನ್ನು ಸೂಚಿಸುವ ಸ್ಪಷ್ಟವಾದ ವಚನವಾಗಿದೆ. ಗ್ರಾಮೀಣರಾಗಿದ್ದ ಜನರು ಅಷ್ಟು ಶೌರ್ಯ ಮತ್ತು ಧೈರ್ಯ ಪ್ರಕಟಿಸಿದುದು ಆಶ್ಚರ್ಯಕರವಾಗಿದೆ. ಅವರು ಎಂತಹ ಪೌರುಷವಂತರಾಗಿದ್ದರೆಂದರೆ ಅವರನ್ನು ಅಲ್ಲಾಹನ ಸ್ಮರಣೆಯಿಂದ ವ್ಯಾಪಾರವಾಗಲಿ ಅನ್ಯ ವ್ಯವಹಾರಗಳಾಗಲಿ ನಿರ್ಲಕ್ಷ್ಯತೆವುಳ್ಳವರನ್ನಾಗಿ ಮಾಡುತ್ತಿರಲಿಲ್ಲ. ಅವರು ಅಲ್ಲಾಹನ ಬಗ್ಗೆ ಎಷ್ಟು ಪರಿಪೂರ್ಣವಾದ ಪ್ರೀತಿ ಹೊಂದಿದ್ದರೆಂದರೆ ಲೌಕಿಕ ವ್ಯವಹಾರಗಳು ಎಷ್ಟು ಹೆಚ್ಚಿಗೆ ಇದ್ದರೂ ಅಲ್ಲಾಹನ ಸ್ಮರಣೆ ಬಗ್ಗೆ ಇದ್ದ ಅವರ ಕಾಳಜಿಯಲ್ಲಿ ಯಾವುದೇ ವ್ಯತ್ಯಾಸವುಂಟಾಗುತ್ತಿರಲಿಲ್ಲ.

ಸಹಾಬ ರಿಝ್ವಾನುಲ್ಲಾಹ್ ಅಲೈಹಿಮ್ ಅಲ್ಲಾಹನೊಂದಿಗೆ ಎಂತಹ ಪ್ರೀತಿಭರಿತ ಸಂಬಂಧವನ್ನು ಸ್ಥಾಪಿಸಿದರೆಂದರೆ ಅವರು ಅಲ್ಲಾಹನನ್ನು ಸ್ಮರಣೆ ಮಾಡುವ ಬಗ್ಗೆ ನಿರ್ಲಕ್ಷ್ಯತೆ ಹೊಂದುವ ಮತ್ತು ಯಾವುದೇ ಬಲಿದಾನ ನೀಡುವುದರಿಂದ ಹಿಂದೆ ಸರಿಯುವ ಪ್ರಶ್ನೆಯೇ ಉದಿಸುತ್ತಿರಲಿಲ್ಲ. ಸಹಾಬರಿಗೆ ಸಂಬಂಧಿಸಿ ಅನೇಕ ಉದಾಹರಣೆಗಳಿವೆ. ಹಝ್ರತ್ ಖಬಾಬ್ ಬಿನ್ ಅಲ್‌ಅರತ್ ಬಗ್ಗೆ ಹೀಗೆ ವರದಿಯಾಗಿದೆ. ಅವರು ಮರಣಾಸನ್ನ ಸ್ಥಿತಿಯಲ್ಲಿದ್ದಾಗ ತನ್ನ ಕಫನ್ ವಸ್ತ್ರ ನೋಡಲು ತರಿಸಿದರು. ಅದು ಬಹಳ ಉತ್ತಮ ಬಟ್ಟೆಯಿಂದ ಮಾಡಿದ ಕಫನ್ ಆಗಿತ್ತು. ಅವರು ತನ್ನ ಸಂಬಂಧಿಕರೊಂದಿಗೆ 'ನೀವು ಇಷ್ಟು ಉತ್ತಮ ಕಫನ್ ನನಗೆ ಸಿದ್ಧಪಡಿಸಿರುವಿರಾ' ಎಂದು ಹೇಳಿ ಅತ್ತರು. ಅವರು ಹೇಳಿದರು: 'ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಚಿಕ್ಕಪ್ಪ ಹಝ್ರತ್ ಹಮ್ಝರಿಗೆ ಒಂದು ಚಾದರ ಕಫನ್ ಆಗಿ ದೊರಕಿತ್ತು. ಅದು ಎಷ್ಟು ಕಡಿಮೆ ಉದ್ದವಾಗಿತ್ತೆಂದರೆ ಕಾಲನ್ನು ಮುಚ್ಚಿದರೆ ತಲೆ ನಗ್ನವಾಗುತ್ತಿತ್ತು, ತಲೆಯನ್ನು ಮುಚ್ಚಿದರೆ ಕಾಲು ನಗ್ನವಾಗಿರುತ್ತಿತ್ತು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿರ್ದೇಶ ಪ್ರಕಾರ ಕಾಲನ್ನು ಹುಲ್ಲಿನಿಂದ ಮುಚ್ಚಲಾಯಿತು.' ಅನಂತರ ಅವರು ಅತ್ಯಂತ ಭಯದಿಂದ ಹೇಳತೊಡಗಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿ ನನ್ನ ಕೈಯ್ಯಲ್ಲಿ ಒಂದು ದೀನಾರ್ ಆಗಲಿ ದಿರ್‌ಹಮ್ ಆಗಲಿ ಇರಲಿಲ್ಲ. ಈಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹ ಮತ್ತು ಅಲ್ಲಾಹನು ನೀಡಿದ ಪಾರಿತೋಷಕಗಳ ಕಾರಣದಿಂದ ಮತ್ತು ತ್ಯಾಗಗಳನ್ನು ಅಲ್ಲಾಹನು ಅಂಗೀಕರಿಸಿದ ಕಾರಣದಿಂದ ಈಗ ನನ್ನ ಸಂಪತ್ತಿನ ಸ್ಥಿತಿ ಹೇಗಿದೆ ಎಂದರೆ ನನ್ನ ಮನೆಯ ಮೂಲೆಯಲ್ಲಿರುವ ಪೆಟ್ಟಿಗೆಯಲ್ಲಿ ಸಹ ಈಗ ನಲ್ವತ್ತು ಸಾವಿರ ದಿರ್‌ಹಮ್‌ಗಳಿವೆ. ಅಲ್ಲಾಹನು ನನಗೆ ಎಷ್ಟು ಅನುಗ್ರಹ ನೀಡಿರುವನೆಂದರೆ ನಾನು ಭಯಪಡುತ್ತೇನೆ– ಅಲ್ಲಾಹನು ನಮ್ಮ ಕರ್ಮಗಳಿಗೋಸ್ಕರ ನೀಡುವ ಪ್ರತಿಫಲವನ್ನು ಈ ಲೋಕದಲ್ಲಿಯೇ ನಮಗೆ ನೀಡಿ ಪರಲೋಕದಲ್ಲಿ ನಮಗೆ ಲಭಿಸಬೇಕಾದ ಪ್ರತಿಫಲದಿಂದ ನಮ್ಮನ್ನು ವಂಚಿತರನ್ನಾಗಿ ಮಾಡದಿರಲಿ ಎಂದು. ನಮಗಿಂತ ಮೊದಲು ಗತಿಸಿ ಹೋದವರು ನಾವು ಇಂದು ಅನುಭವಿಸುತ್ತಿರುವಂತಹ ಸಾಂಪತ್ತಿಕ ಅನುಗ್ರಹ ಅನುಭವಿಸಿರಲಿಲ್ಲ.

ಮುಆಝ್ ಬಿನ್ ಜಬಲ್ ಎಂಬ ಸಹಾಬಿ ಬಗ್ಗೆ ಹೀಗೆ ವರದಿಯಾಗಿದೆ: ಅವರು ತಹಜ್ಜುದ್ ನಮಾಝ್ ಅನುಷ್ಠಿಸುವವರೂ ದೀರ್ಘ ಸಮಯ ನಮಾಝ್ ಅನುಷ್ಠಿಸುವವರೂ ಆಗಿದ್ದರು. ಅವರ ಆಪ್ತರಾಗಿದ್ದವರ ಹೇಳಿಕೆ ಪ್ರಕಾರ ಅವರು ತಹಜ್ಜುದ್ ನಮಾಝ್‌ಗಳಲ್ಲಿ ಹೀಗೆ ಪ್ರಾರ್ಥಿಸುತ್ತಿದ್ದರು: ಓ ನನ್ನ ಪ್ರಭೂ, ಕಣ್ಣುಗಳು ನಿದ್ರಿಸುತ್ತಿವೆ, ಓ ಅಲ್ಲಾಹ್ ನೀನು ಹಯ್ಯುನ್ ಖಯ್ಯೂಮ್ ಆಗಿರುವೆ. ನಾನು ನಿನ್ನಿಂದ ಸ್ವರ್ಗವನ್ನು ಬೇಡುತ್ತೇನೆ. ನಾನು ಸತ್ಕರ್ಮಗಳನ್ನು ಮಾಡುವುದರಿಂದ ಉದಾಸೀನನಾಗಿರುವೆನು. ನರಕಾಗ್ನಿಯಿಂದ ದೂರ ಓಡಿ ಹೋಗಲು ಬಲಹೀನನಾಗಿರುವೆನು. ನರಕಾಗ್ನಿ ಇದೆ ಎಂದೂ ಅದರಿಂದ ರಕ್ಷಣೆ ಪಡೆಯಲು ಒಳಿತುಗಳನ್ನು ಮಾಡಬೇಕೆಂದೂ ನನಗೆ ತಿಳಿದಿದೆ. ಆದರೆ ನರಕಾಗ್ನಿಯಿಂದ ರಕ್ಷಣೆ ಪಡೆಯಲು ಶಕ್ತಿಹೀನನಾಗಿದ್ದೇನೆ. ಓ ಅಲ್ಲಾಹ್ ನೀನೇ ನನಗೆ ಮಾರ್ಗದರ್ಶನ ನೀಡು.

ಆ ಸಹಾಬರಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಶುದ್ಧ ಶಕ್ತಿ ಒಂದು ಕ್ರಾಂತಿ ಉಂಟುಮಾಡಿತ್ತು. ಹೀಗೆ ಆಗದಿರುತ್ತಿದ್ದರೆ ಅವರ ಪ್ರೀತಿಯ ವೃತ್ತಾಂತಗಳು ಎಂದೂ ಬರೆಯಲ್ಪಡುತ್ತಿರಲಿಲ್ಲ. ಸಹಾಬರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಲ್ಲಮರ ಬಗ್ಗೆ ಇದ್ದ ಪ್ರೀತಿಯ ಸಮಾನ ಉದಾಹರಣೆಗಳು ಬೇರೆಲ್ಲಿಯೂ ಕಾಣಿಸುವುದಿಲ್ಲ. ಉಹುದ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ತಲ್‌ಹ ಪ್ರಕಟಿಸಿದ ಪ್ರೀತಿಯ ವಿವರಣೆ ಸಿಗುತ್ತಿದೆ. ಅವರು ತನ್ನ ಕೈಯನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖದ ಮುಂದೆ ಇರಿಸಿ ಶತ್ರುಗಳ ಬಾಣಗಳನ್ನು ತಡೆದರು. ಹಝ್ರತ್ ಶಮಾಸ್ ಎಂಬ ಸಹಾಬಿ ಸಹ ಬಹಳ ಮಹತ್ವಪೂರ್ಣವಾದ ಕೆಲಸ ಮಾಡಿದ್ದರು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ನಿಂತು ಎಲ್ಲಾ ಆಕ್ರಮಣಗಳು ತನ್ನ ಮೇಲಾಗುವಂತೆ ಮಾಡಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೀಗೆ ಹೇಳಿದ್ದರು: ಶಮಾಸರನ್ನು ಯಾವುದಾದರೂ ಒಂದು ವಸ್ತುವಿನೊಂದಿಗೆ ಹೋಲಿಕೆ ಹೊಂದಿರುವುದಾಗಿ ಹೇಳುವುದಾದರೆ ಗುರಾಣಿಯೊಂದಿಗೆ ಹೋಲಿಕೆ ನೀಡುತ್ತೇನೆ. ಉಹುದ್ ಯುದ್ಧ ಕ್ಷೇತ್ರದಲ್ಲಿ ಅವರು ನನಗೋಸ್ಕರ ಗುರಾಣಿ ಆಗಿದ್ದರು. ಅವರು ನನ್ನ ಮುಂದೆ, ಹಿಂದೆ, ಬಲ ಭಾಗದಲ್ಲಿ, ಎಡ ಭಾಗದಲ್ಲಿ ನನ್ನನ್ನು ಸಂರಕ್ಷಿಸುತ್ತಾ ಕೊನೆಯುಸಿರಿನ ತನಕ ಹೋರಾಡಿದರು.

ಸತ್ಯವನ್ನು ಹೇಳುವುದು ಮತ್ತು ಯಾರಿಗೂ ಹೆದರದಿರುವುದು ಸಹಾಬರ ಸ್ವಭಾವಗುಣವಾಗಿತ್ತು. ಹಝ್ರತ್ ಸಈದ್ ಬಿನ್ ಝೈದ್ ಬಗ್ಗೆ ಹೀಗೆ ವರದಿಯಾಗಿದೆ: ಕೂಫ ನಗರದಲ್ಲಿ ಅಮೀರ್ ಮುಆವಿಯ ನೇಮಿಸಿದ ಗವರ್ನರ್ ಜಾಮಿಅ ಮಸ್‌ಜಿದ್‌ನಲ್ಲಿ ಕುಳಿತಿದ್ದರು.

ಹಝ್ರತ್ ಸಈದ್ ಅಲ್ಲಿಗೆ ಬಂದಾಗ ಗವರ್ನರ್ ಬಹಳ ಗೌರವದಿಂದ ಅವರನ್ನು ಸ್ವಾಗತಿಸಿ ತನ್ನ ಸಮೀಪ ಕುಳ್ಳಿರಿಸಿದರು. ಆಗ ಅಲ್ಲಿಗೆ ಕೂಫ ನಿವಾಸಿಯಾದ ಓರ್ವ ವ್ಯಕ್ತಿ ಆಗಮಿಸಿ ಹಝ್ರತ್ ಅಲಿಯವರನ್ನು ನಿಂದಿಸಲು ಪ್ರಾರಂಭಿಸಿದನು. ಹಝ್ರತ್ ಸಈದ್ ಬಹಳ ಕೋಪಗೊಂಡು ಹೇಳಿದರು: ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಹೀಗೆ ಆಲಿಸಿದ್ದೆನು, ಅಬೂಬಕರ್, ಉಮರ್, ಉಸ್ಮಾನ್, ಅಲಿ, ತಲ್ಹ, ಝುಬೈರ್ ಬಿನ್ ಅವಾಮ್, ಸಅದ್, ಮತ್ತು ಅಬ್ದುರ್ರಹ್ಮಾನ್ ಬಿನ್ ಔಫ್ ಸ್ವರ್ಗವನ್ನು ಪಡೆಯುವರೆಂದು. ಅನಂತರ ಹೇಳಿದರು, ಹತ್ತನೆಯದಾಗಿ ಒಬ್ಬರಿದ್ದಾರೆ ಅವರ ಹೆಸರು ನಾನು ಹೇಳುವುದಿಲ್ಲ. ಒತ್ತಾಯ ಮಾಡಿದಾಗ ಹೇಳಿದರು: ಹತ್ತನೆಯವ ನಾನು, ಸಈದ್ ಬಿನ್ ಝೈದ್ ಆಗಿದ್ದೇನೆ. ಅವರು ಹೀಗೆ ಸಹ ವರದಿ ಮಾಡಿದ್ದಾರೆ: ಎಲ್ಲದಕ್ಕಿಂತಲೂ ದೊಡ್ಡದಾದ ನಿಷಿದ್ಧ ವಸ್ತು ಮುಸ್ಲಿಮನ ಗೌರವದ ಮೇಲೆ ಆಕ್ರಮಣ ಮಾಡುವುದಾಗಿದೆ.

ಇಂದಿನ ಕಾಲದಲ್ಲಿ ಮುಸ್ಲಿಮರು ಈ ವಿಷಯವನ್ನು ಮರೆತು ಬಿಟ್ಟಿದ್ದಾರೆ. ಮುಸ್ಲಿಮರು ಮುಸ್ಲಿಮರ ಗೌರವದ ವಿರುದ್ಧ ತಮ್ಮ ಸ್ವಾರ್ಥ ಹಿತಕ್ಕೋಸ್ಕರ ದೊಡ್ಡ ಪ್ರಮಾಣದಿಂದ ಮೊದಲುಗೊಂಡು ಚಿಕ್ಕ ಪ್ರಮಾಣದ ತನಕ ಆಕ್ರಮಣಗಳನ್ನು ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ.

ಪ್ರತಿಯೊಬ್ಬ ಸಹಾಬಿಗೆ ತನ್ನದೇ ಆದ ಒಂದು ವೈಶಿಷ್ಟ್ಯವಿತ್ತು. ಒಮ್ಮೆ ಹಝ್ರತ್ ಉಮರ್ ಹಝ್ರತ್ ಸುಹೈಬ್‌ರೊಂದಿಗೆ ಈ ರೀತಿ ಹೇಳಿದರು. ನೀವು ಬಹಳ ಜನರಿಗೆ ಊಟ ಮೊದಲಾದವುಗಳನ್ನು ನೀಡುತ್ತಿರುವಿರಿ. ನೀವು ಅದಕ್ಕೆ ಸಂಬಂಧಿಸಿ ದುಂದುವೆಚ್ಚ ಮಾಡುತ್ತಿರುವ ಬಗ್ಗೆ ನನಗೆ ಭಯವಿದೆ. ಹಝ್ರತ್ ಸುಹೈಬ್ ಹೇಳಿದರು: ನಾನು ಆಹಾರವನ್ನು ಜನರಿಗೆ ನೀಡುತ್ತಿರುವುದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಂದು ಉಪದೇಶದ ಪ್ರಕಾರವೇ ಆಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೀಗೆ ಹೇಳಿದ್ದರು: ಯಾರು ಜನರಿಗೆ ಊಟ ಮಾಡಿಸುತ್ತಾರೋ ಮತ್ತು ಸಲಾಮ್ ಹೇಳುವುದನ್ನು ರೂಢಿಯಾಗಿ ಮಾಡುತ್ತಾರೋ ಅವರೇ ನಿಮ್ಮವರಲ್ಲಿ ಉತ್ತಮರು. ನಾನು ಈ ಉಪದೇಶವನ್ನು ನೆನಪಿನಲ್ಲಿಟ್ಟುಕೊಂಡಿದ್ದೇನೆ. ನಾನು ಸಂಪತ್ತನ್ನು ನ್ಯಾಯಬದ್ಧವಾಗಿ ಹೊರತು ಖರ್ಚು ಮಾಡುವುದಿಲ್ಲ. ನಾನು ದುಂದು ವೆಚ್ಚ ಮಾಡುವುದಿಲ್ಲ ಎಂದು ಹೇಳಿದರು. ಹಝ್ರತ್ ಸುಹೈಬ್‌ರವರ ಸ್ಥಾನ ಹಝ್ರತ್ ಉಮರರ ದೃಷ್ಟಿಯಲ್ಲಿ ಬಹಳ ದೊಡ್ಡದಾಗಿತ್ತು. ತಾನು ಮೃತನಾದರೆ ತನ್ನ ಜನಾಝ ನಮಾಝನ್ನು ಹಝ್ರತ್ ಸುಹೈಬ್ ನಿರ್ವಹಿಸಬೇಕೆಂದು ಹಝ್ರತ್ ಉಮರ್ ವಸಿಯ್ಯತ್ ಮಾಡಿದ್ದರು. ಮುಂದಿನ ಖಲೀಫರು ಚುನಾಯಿತರಾಗುವ ತನಕ ಹಝ್ರತ್ ಸುಹೈಬ್ ನಮಾಝ್‌ಗಳ ಇಮಾಮತ್ ಸಹ ಮಾಡಿಸುತ್ತಿದ್ದರು.

ಹಝ್ರತ್ ಉಸಾಮ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಿಮೋಚಿಸಿದ ಗುಲಾಮರಾಗಿದ್ದ ಹಝ್ರತ್ ಝೈದ್‌ರ ಪುತ್ರರಾಗಿದ್ದರು. ಹಝ್ರತ್ ಉಸಾಮ ಭಾಗ್ಯಶಾಲಿಯಾಗಿದ್ದರು. ಅವರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಪ್ರೀತಿಯ ಪ್ರಶಸ್ತಿ ನೀಡಿದ್ದರು. ಆದರೆ ತರಬೇತಿ ಮತ್ತು ಧರ್ಮಕ್ಕೆ ಸಂಬಂಧಿಸಿ ಅಲ್ಲಾಹನ ಆಜ್ಞೆಗಳು ಆದ್ಯತೆ ಪಡೆಯುತ್ತವೆ. ವೈಯ್ಯಕ್ತಿಕ ಸಂಬಂಧಗಳು ಕೊನೆಗೊಳ್ಳುತ್ತವೆ. ಒಂದು ಘಟನೆ ಹೀಗಿದೆ, ಒಂದು ಯುದ್ಧದ ಸಂದರ್ಭದಲ್ಲಿ ಒಬ್ಬ ಅವಿಶ್ವಾಸಿ ಉಸಾಮರ ಎದುರಿಗೆ ಬಂದಾಗ ಕೂಡಲೇ ಕಲಿಮ ಪಠಿಸಿದನು. ಅವನು ಮೃತ್ಯುವಿಗೆ ಹೆದರಿ ಕಲಿಮ ಉಚ್ಚರಿಸುತ್ತಾನೆಂದು ಭಾವಿಸಿ ಅವನನ್ನು ಉಸಾಮ ಕೊಂದು ಬಿಟ್ಟರು. ಹಝ್ರತ್ ಉಸಾಮ ಹೇಳುತ್ತಾರೆ: ನಾನು ಈ ಘಟನೆಯನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ವಿವರಿಸಿದಾಗ ಅವರು ಕೇಳಿದರು: ಅವನು ಕಲಿಮ ಉಚ್ಚರಿಸಿದ ನಂತರ ಸಹ ನೀನು ಅವನನ್ನು ಕೊಂದೆಯಾ? ನಾನು ಹೇಳಿದೆ: ಅವನು ತನ್ನನ್ನು ರಕ್ಷಿಸಿಕೊಳ್ಳಲು ಕಲಿಮ ಉಚ್ಚರಿಸಿದ್ದನು ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು: ನೀನು ಅವನ ಹೃದಯವನ್ನು ಸೀಳಿ ನೋಡಿರುವೆಯಾ? ಪುನಃ ಹೇಳಿದರು: ಅವನು ಶಹಾದತ್ ಕಲಿಮ ಉಚ್ಚರಿಸಿದರೂ ಸಹ ನೀನು ಅವನನ್ನು ಕೊಂದೆಯಾ? ಹಝ್ರತ್ ಉಸಾಮ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಈ ಮಾತನ್ನು ಎಷ್ಟು ಸಲ ಪುನರಾವರ್ತಿಸಿದರೆಂದರೆ ನಾನು ಯೋಚಿಸಿದೆ, ನಾನು ಇವತ್ತಿಗಿಂತ ಮೊದಲು ಮುಸ್ಲಿಮನಾಗದೆ ಇರುತ್ತಿದ್ದರೆ ಎಷ್ಟು ಚೆನ್ನಾಗಿತ್ತು. ಉಸಾಮ ಹೇಳುತ್ತಾರೆ: ನಾನು ಪ್ರತಿಜ್ಞೆ ಮಾಡಿದೆ. **ಲಾಇಲಾಹ ಇಲ್ಲಲ್ಲಾಹ್** ಎಂಬ ಕಲಿಮ ಉಚ್ಚರಿಸುವ ಯಾರನ್ನೂ ಇನ್ನು ಮುಂದೆ ಕೊಲ್ಲಲಾರೆನು ಎಂದು.

ಈ ವಿಷಯ ಇಂದಿನ ಕಾಲದಲ್ಲಿ ಮುಸ್ಲಿಮರಿಗೂ ಮನವರಿಕೆ ಆಗಿದ್ದರೆ ಎಷ್ಟು ಚೆನ್ನಾಗಿತ್ತು. ಇಸ್ಲಾಮಿನ ಹೆಸರಿನಲ್ಲಿ ಮುಸ್ಲಿಮೇತರರ ವಿರುದ್ಧ ಮುಸ್ಲಿಮರು ದೌರ್ಜನ್ಯ ಮಾಡುತ್ತಿದ್ದಾರಲ್ಲದೆ ಪರಸ್ಪರ ಮುಸ್ಲಿಮರು ಮುಸ್ಲಿಮರನ್ನೂ ಕೊಲ್ಲುತ್ತಿದ್ದಾರೆ. ಸಿರಿಯಾದ ಯುದ್ಧದ ಬಗ್ಗೆ ಹೇಳಲಾಗುತ್ತದೆ, ಕಳೆದ ಅನೇಕ ವರ್ಷಗಳಿಂದ ಅಲ್ಲಿ ಯುದ್ಧ ಜಾರಿಯಲ್ಲಿದೆ. ಯುದ್ಧ ಪ್ರಾರಂಭವಾದ ನಂತರ ಅಲ್ಲಿ ಲಕ್ಷಗಟ್ಟಲೆ ಜನರು ಕೊಲ್ಲಲ್ಪಟ್ಟರು. ಮುಸ್ಲಿಮರು ಮುಸ್ಲಿಮರನ್ನೇ ಹತ್ಯೆ ಮಾಡಿದ್ದಾರೆ. ಕಲಿಮ ಉಚ್ಚರಿಸುವವರು ಕಲಿಮ ಉಚ್ಚರಿಸುವ ಇತರರನ್ನು ಕೊಲ್ಲುತ್ತಿದ್ದಾರೆ. ಯಮನಿನಲ್ಲಿ ಸಹ ಕಲಿಮ ಉಚ್ಚರಿಸುವವರನ್ನೇ ಕೊಲ್ಲುತ್ತಿದ್ದಾರೆ. ಅಲ್ಲಿ ಇತರ ದೌರ್ಜನ್ಯಗಳೂ ಜಾರಿಯಲ್ಲಿವೆ. ಚಿತ್ರಹಿಂಸೆ ನೀಡಲಾಗುತ್ತಿದೆ. ಅಲ್ಲಾಹನು ಈ ಮುಸ್ಲಿಮರಿಗೆ ಬುದ್ಧಿ ನೀಡಲಿ. ಅವರು ಸಹಾಬರನ್ನು ಪ್ರೀತಿಸುವ ಮತ್ತು ರಸೂಲರನ್ನು ಪ್ರೀತಿಸುವ ಘೋಷಣೆಯನ್ನು ಮಾತ್ರ ಕೂಗುವವರಾಗದಿರಲಿ. ಬದಲಾಗಿ ಅವರು ವರ್ತಿಸಿದ ಪ್ರಕಾರ ವರ್ತಿಸುವವರೂ ಆಗಲಿ. ಆದರೆ ವಾಸ್ತವಿಕವಾಗಿ ಈ ಜನರು ಇಸ್ಲಾಮಿನ ಹೆಸರಲ್ಲಿ ತಮ್ಮ ಅಹಂಭಾವವನ್ನು ಪ್ರಕಟಿಸುತ್ತಿದ್ದಾರೆ. ಅವರಿಗೆ ಇಸ್ಲಾಮ್ ಕುರಿತು ಪ್ರಾಥಮಿಕ ಜ್ಞಾನ ಸಹ ಇಲ್ಲ. ಅವರು ತಮ್ಮ ಶ್ರೇಷ್ಠತೆ ಪ್ರಕಟಿಸುವ ಪ್ರಯತ್ನ ಮಾತ್ರ ಮಾಡುತ್ತಿದ್ದಾರೆ. ಅವರ ಬಾಯಿಯಲ್ಲಿ ಅಲ್ಲಾಹನ ನಾಮವಿದ್ದರೂ ಅವರ ಹೃದಯದಲ್ಲಿ ಕೇವಲ ತಮ್ಮ ಸ್ವಾರ್ಥ ಮಾತ್ರವಿದೆ.

ಅಲ್ಲಾಹನು ಲೋಕದಲ್ಲಿ ವಾಸ್ತವಿಕ ತಖ್ವವನ್ನು ಜನರಲ್ಲಿ ಹುಟ್ಟಿಸಲು ಈ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿದನು. ಇಂದಿನ ಮುಸ್ಲಿಮರ ಸ್ಥಿತಿಯನ್ನು ನೋಡುವುದಾದರೆ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವ ತನಕ ಅವರ ಸುಧಾರಣೆ ಆಗಲಾರದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಸತ್ಯಸಂಧರಾದ ಸೇವಕನನ್ನಾಗಿ ಮಾಡಿ ಅಲ್ಲಾಹನು ಈ ಕಾಲಘಟ್ಟದಲ್ಲಿ ಕಳುಹಿಸಿಕೊಟ್ಟ ಮಾರ್ಗದರ್ಶಕರನ್ನು ನಂಬುವ ಭಾಗ್ಯವನ್ನು ಅಲ್ಲಾಹನು ನಮಗೆ ನೀಡಿದುದಕ್ಕೋಸ್ಕರ ನಾವು ಅಲ್ಲಾಹನಿಗೆ ಕೃತಜ್ಞತೆಗಳನ್ನು ಅರ್ಪಿಸುವವರಾಗಬೇಕು. ಅವರು ನಮಗೆ ಸಹಾಬರ ಸ್ಥಾನದ ಬಗ್ಗೆ ತಿಳಿಸಿದರಲ್ಲದೆ ಅವರನ್ನು ಅನುಸರಿಸುವ ಬಗ್ಗೆ ಸಹ ಉಪದೇಶಿಸಿದ್ದಾರೆ. ಸಹಾಬರ ಉದಾಹರಣೆಗಳು ಯಾವ ರೀತಿಯಲ್ಲಿವೆ ಎಂದು ಅವರು ವಿಶದೀಕರಿಸಿದರು. ನೀವು ಅವರ ನಡೆವಳಿಕೆಯನ್ನು ಆದರ್ಶ ಮಾದರಿಯನ್ನಾಗಿ ಮಾಡಿಕೊಳ್ಳಬೇಕು ಮತ್ತು ಅವರನ್ನು ಅನುಸರಿಸುವ ಪ್ರಯತ್ನ ಮಾಡಬೇಕು ಎಂದು ಅವರು ನಮಗೆ ಕಲಿಸಿದರು. ಆದುದರಿಂದ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾತುಗಳನ್ನು ಮನವರಿಕೆ ಮಾಡಿಕೊಳ್ಳಲು ಮತ್ತು ಅವುಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನ ಮಾಡುವುದಾದರೆ ನಾವು ವಾಸ್ತವಿಕ ಮುಸ್ಲಿಮರಾಗುವೆವು.

ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳನ್ನು ಕಾರ್ಯರೂಪಕ್ಕೆ ತಂದು ಅಲ್ಲಾಹನನ್ನು ಮತ್ತು ಅವನ ರಸೂಲರನ್ನು ವಾಸ್ತವಿಕವಾಗಿ ಅನುಸರಿಸುವವರಾಗುವ ಮತ್ತು ಆಜ್ಞೆಗಳನ್ನು ಪಾಲಿಸುವವರಾಗುವ ಭಾಗ್ಯ ಅಲ್ಲಾಹನು ನಮಗೆ ದಯಪಾಲಿಸಲಿ – ಆಮೀನ್.

(ಖುತ್‌ಬದ ಕೊನೆಗೆ ಹುಝೂರ್ 2018 ಜನವರಿ 9ರಂದು ನಿಧನ ಹೊಂದಿದ ಮುಕರ್ರಮ ಅಮತುಲ್ ಮಜೀದ್ ಅಹ್ಮದ್ ಸಾಹಿಬರವರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವುದಾಗಿ ಹೇಳಿ ಅವರ ಸದ್ಗುಣಗಳನ್ನು ವಿವರಿಸಿದರು.)

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 12-01-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon